ಸಾಗುವಳಿಯಲ್ಲಿ ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಅವನಿಗೆ ಎಷ್ಟು ಹೋಲ್ಡಿಂಗ್ ಇದೆ, ಅದರಮೇಲೆ ಮಂಜೂರಾತಿ ಆಗುತ್ತದೆ.

ಶ್ರೀ ಬಿ.ಬಿ.ಶಿವಪ್ಪ: ಅದು ಅಲ್ಲ. ಹೋಲ್ಡಿಂಗ್ ಸೇರಿ ನಾಲ್ಕು ಎಕರೆ 38 ಗುಂಟೆ ಅವನಿಗೆ ಬರಬೇಕು. ಅದು ಎಕ್ಸಿಸ್ಟಿಂಗ್ ಹೋಲ್ಡಿಂಗ್-ಪ್ಲಸ್ ಅವನು ಎನ್‌ಕ್ರೋಚ್‌ಮೆಂಟ್ ಮಾಡಿರುವುದೂ ಸೇರಿದರೆ 4 ಎಕರೆ 38 ಗುಂಟೆ ಲಿಮಿಟ್ ಮಾಡಿದ್ದಾರೆ.

ಅಧ್ಯಕ್ಷರು: ಶಿವಪ್ಪನವರೇ, ಅದು ಎನ್‌ಕ್ರೋಚ್‌ಮೆಂಟ್ ಅಲ್ಲ. Encroachment is done by a powerful man. It is an unauthorised cultivation. Unauthorised cultivation is done by a helpless, poor farmer who is landless. Encroachment is done essentially by a strong man. The government is contemplating to regularise such land which is unauthorisedly being cultivagted, not encorachment. ಹೌದಾ? I hope so. ನನಗೆ ಗೊತ್ತಿಲ್ಲ. The government should explain its position.

ಶ್ರೀ ಬಿ.ಬಿ.ಶಿವಪ್ಪ: ಅಲ್ಲಲ್ಲ. ನಾನು ಏನು ಹೇಳುತ್ತಿದ್ದೇನೆ ಎಂದರೆ ಯಾರೋ ಒಬ್ಬ ಬಡವ ಇದ್ದಾನೆ. ಅವನ ಎಕ್ಸಿಸ್ಟಿಂಗ್ ಲ್ಯಾಂಡ್ ಸೇರಿ ಪಕ್ಕದಲ್ಲಿ ಅವನು ಎನ್‌ಕ್ರೋಚ್ ಮಾಡಿದರೆ ನಾಲ್ಕು ಎಕರೆ 38 ಗುಂಟೆ ಎಂದು ಲಿಮಿಟೇಷನ್ ಇದೆ. ಅಲ್ಲಿವರೆಗೆ ಅವನು ಎನ್‌ಕ್ರೋಚ್ ಮಾಡಬಹುದು. ಅದರ ಮೇಲೆ ಹೋಗುವುದಕ್ಕೆ ಆಗುವುದಿಲ್ಲ. ಅದು ಎಕ್ಸಿಸ್ಟಿಂಗ್ ಹೋಲ್ಡಿಂಗ್ ಸೇರಿ. ಆದರೆ ಇಂಥಾದ್ದೇ ಬೆಳೆ ಬೆಳೆಯಬೆಕು ಎಂದು ನಿಗದಿ ಮಾಡಿದ್ದೀರಿ. ಈಗ ನಮ್ಮಲ್ಲಿ ಕಾಫಿ ಬೆಳೆದರೆ ಮಂಜೂರು ಆಗುವುದಿಲ್ಲ, ಏಲಕ್ಕಿ ಬೆಳೆದರೆ ಮಂಜೂರು ಆಗುವುದಿಲ್ಲ.

MR. SPEAKER: You can kindly look into it.

ಶ್ರೀ ಬಿ.ಎನ್.ಬಚ್ಚೇಗೌಡ: ಅದರ ಬಗ್ಗೆ ಪರಿಶೀಲಿಸುತ್ತೇನೆ.

MR. SPEAKER: O, Yes. That is a good answer.

ಜಯನಗರ ವಿಧಾನ ಸಭಾಕ್ಷೇತ್ರದಲ್ಲಿನ ಗುರಪ್ಪನ ಪಾಳ್ಯದಲ್ಲಿ ಪೊಲೀಸ್ ಠಾಣೆ,

14 (60)

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ

ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿನ ಗುರಪ್ಪನ ಪಾಳ್ಯ ಹಾಗೂ ಬಿಟ್ಟಿಲ್ಲಾ ನಗರಗಳಲ್ಲಿ ಪೊಲೀಸ್ ಠಾಣೆ ಅವಶ್ಯಕವೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಮೇಲ್ಕಂಡ ಸ್ಥಳಗಳಲ್ಲಿ ಪೊಲೀಸ್ ಠಾಣೆ ತೆರೆಯಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಆರ್.ರೋಷನ್ ಬೇಗ್ (ಗೃಹ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ: ಸಭಾಧ್ಯಕ್ಷರೇ, ಕ್ಷೇತ್ರದ ಗುರಪ್ಪನಪಾಳ್ಯ ಬಹಳ ಸೆನ್ಸಿಟಿವ್ ಏರಿಯಾ. ಕಾರಣ ಇಲ್ಲದೇನೇ ಕಮ್ಯುನಲ್ ಕ್ಲಾಷಸ್ ಆಗುತ್ತಾ ಇರುತ್ತದೆ. ಅಲ್ಲಿಗೆ ಸಂಬಂಧಪಡದೆ ಇದ್ದರೂನು ಬೇರೆ ಎಲ್ಲೋ ಗಲಾಟೆ ಆದರೂ ಇಲ್ಲಿ ಯಾವಾಗಲೂ ಕಮ್ಯೂನಲ್ ಕ್ಲಾಷಸ್ ಆಗುತ್ತದೆ. ಇದನ್ನು ನಾನು ಮಾನ್ಯ ಸಚಿವರ ಗಮನಕ್ಕೂ ತಂದಿದ್ದೇನೆ. ಸಚಿವರು ಅಲ್ಲಿ ವಿಸಿಟ್ ಮಾಡಿದ್ದರು. ಅಲ್ಲಿ ಒಂದು ಪೊಲೀಸ್ ಸ್ಟೇಷನ್ ಬೇಕು ಎಂದು ಕೇಳಿದ್ದೇವೆ. ಈಗ ಮಾನ್ಯ ಸಚಿವರು ಮೊದಲು ಇಲ್ಲ ಎಂದು ಹೇಳಿ ಆಮೇಲೆ ಪೊಲೀಸ್ ಸ್ಟೇಷನ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ಪೊಲೀಸ್ ಸ್ಟೇಷನ್ ಅನ್ನು ನೀವು ಗುರಪ್ಪನಪಾಳ್ಯದಲ್ಲೇ ಮಾಡಬೇಕು. ನನಗೆ ತಿಳಿದಮಟ್ಟಿಗೆ ನಿಮ್ಮ ಇಲಾಖೆಯಲ್ಲಿ ತಾವರೆಕೆರೆಯಲ್ಲಿ ಮಾಡಬೇಕೆಂದು ಇದ್ದಾರೆ. ಗುರುಪ್ಪನ ಪಾಳ್ಯದಲ್ಲಿ ಸಿ.ಎ.ಸೈಟನ್ನು ಹಿಂದೆ ನಾವು ಪೊಲೀಸ್ ಸ್ಟೇಷನ್‌ಗೆ ಎಂದೇ ಕೊಟ್ಟಿದ್ದೇವೆ. ಅದು ಖಾಲಿಯಾಗಿದೆ. ಅಲ್ಲಿ ಇನ್ನೂ ಕಟ್ಟಡ ಕೂಡ ಕಟ್ಟಿಲ್ಲ. ತತಕ್ಷಣಕ್ಕೆ ಬೇಕಾದರೆ ಬಾಡಿಗೆ ಮನೆ ತೆಗೆದುಕೊಂಡು ಒಂದು ಪೊಲೀಸ್ ಸ್ಟೇಷನ್ ಅನ್ನು ಆದಷ್ಟು ಬೇಗ ಮಾಡಬೇಕು. ಮತ್ತು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ತಾವು ಹೇಳಬೇಕು.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಸದಸ್ಯರ ಸೂಚನೆಯನ್ನು ನಾನು ಒಪ್ಪುತ್ತೇನೆ. ಅಲ್ಲಿ ಲಾ ಅಂಡ್ ಆರ್ಡರ್ ಪರಿಸ್ಥಿತಿ ನೋಡಿದರೆ ಆ ಗುರಪ್ಪನಪಾಳ್ಯದಲ್ಲಿ ಒಂದು ಪೊಲೀಸ್ ಸ್ಟೇಷನ್ ಬೇಕಾಗುತ್ತದೆ. 1997-98ರಲ್ಲಿ ಹೊಸ ಪೊಲೀಸ್ ಸ್ಟೇಷನ್‌ಗಳನ್ನು ನಾವೇನು ಮಾಡುತ್ತೇವೆ, ಅದರಲ್ಲಿ ಗುರಪ್ಪನಪಾಳ್ಯದಲ್ಲೂ ಒಂದು ಪೊಲೀಸ್ ಸ್ಟೇಷನ್ ಕೊಡುತ್ತೇವೆ ಎಂದು ಅವರಿಗೆ ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ರೆಗ್ಯುಲರ್ ಪೊಲೀಸ್ ಸ್ಟೇಷನ್ ಆಗುವವರೆಗೂ ಒಂದು

ಔಟ್‌ಪೋಸ್ಟ್‌ನ್ನು ಕೊಡುವುದಕ್ಕೆ ತಾವು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಆರ್.ರೋಷನ್ ಬೇಗ್: ಇದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ವಾಟಾಳರೇ, ಪ್ರಶ್ನೋತ್ತರ ಮುಗಿದುಹೋಗಿದೆ ಅಲ್ಲವೆ? ನಿಮ್ಮದೊಂದು ಇದೆ ಅಲ್ವಾ? ಅದು ಕಡೆಯ ಪ್ರಶ್ನೆ.

ಅಬಕಾರಿ ಗುತ್ತಿಗೆದಾರರಿಂದ ಬರಬೇಕಾಗಿರುವ ಬಾಕಿ ಹಣ

15 (27)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಕ್ಕೆ ಅಬಕಾರಿ ಗುತ್ತಿಗೆದಾರರಿಂದ ಇದುವರೆವಿಗೆ ಬರಬೇಕಾದ ಬಾಕಿ ಹಣದ ಮೊತ್ತವೆಷ್ಟು?

ಆ) ಬೆಂಗಳೂರು ನಗರ, ಬೆಂಗಳೂರು ಜಿಲ್ಲೆಯಲ್ಲಿ ಇರುವ ಅಬಕಾರಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಧೀಕ್ಷಕರ ಸಂಖ್ಯೆ ಎಷ್ಟು? ಅವರುಗಳು ಯಾರು ಯಾರು ಎಷ್ಟು ವರ್ಷಗಳಿಂದ ಇದ್ದಾರೆ?

ಇ) ಬೆಂಗಳೂರು ಸೇರಿದಂತೆ ಕರ್ನಾಟಕ ರಾಜ್ಯಾದ್ಯಂತ ಇರುವ ಅಬಕಾರಿ ಜಿಲ್ಲಾಧಿಕಾರಿಗಳು ಹಾಗೂ ಅಧೀಕ್ಷಕರುಗಳು ಇವರುಗಳಲ್ಲಿ ಎಷ್ಟು ಜನರ ಮೇಲೆ ಮೊಕದ್ದಮೆಗಳು ಇವೆ

ಈ) ಇವರುಗಳಲ್ಲಿ ಎಷ್ಟು ಜನರನ್ನು ಅಮಾನತ್ತುಗೊಳಿಸಲು ಸರ್ಕಾರದವರು ಆದೇಶ ನೀಡಿದ್ದಾರೆ (ವಿವರ ನೀಡುವುದು)

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಅಬಕಾರಿ ಗುತ್ತಿಗೆದಾರರಿಂದ ದಿನಾಂಕ 30.11.1997ರಲ್ಲಿ ಇದ್ದಂತೆ ಬಾಕಿ ಬರಬೇಕಾದ ಬಾಕಿ ರೂ.297.89 ಕೋಟಿಗಳು.

ಆ) ಬೆಂಗಳೂರು ನಗರ, ಬೆಂಗಳೂರು ಜಿಲ್ಲೆಯಲ್ಲಿ ಇರುವ ಅಬಕಾರಿ ಉಪ ಆಯುಕ್ತರು ಹಾಗೂ ಅಬಕಾರಿ ಅಧೀಕ್ಷಕರ ಸಂಖ್ಯೆ ಈ ಕೆಳಗಿನಂತೆ ಇದೆ.